## 11

# ನಾಬಾಲ

## ಬೆಲಿಯೇಲನ ಮಗನು

## (25:2-39)

ದುಷ್ಟತನಕ್ಕೆ ತನ್ನ ಪ್ರಭಾವ ತೋರ್ಪಡಿಸಲು ಮತ್ತು ತನ್ನ ಸ್ವಭಾವವನ್ನು ಹರಡಲು ಒಳ್ಳೆಯದಕ್ಕಿಂತ ಹೆಚ್ಚಿನ ಬಲವಿದೆ. ಕಲುಷಿತಗೊಂಡ ಒಂದು ಹನಿಯು ಒಂದು ಲೋಟ ನೀರನ್ನು ಸಂಪೂರ್ಣವಾಗಿ ಹಾಳು ಮಾಡುತ್ತದೆ; ಆದರೆ ಒಂದು ಹನಿ ಒಳ್ಳೆಯ ನೀರು, ಒಂದು ಲೋಟ ಕಲುಷಿತಗೊಂಡ ನೀರನ್ನು ಸುಧಾರಿಸಲು ಸಾಧ್ಯವಿಲ್ಲ. ದೇಹ ಉಳಿದ ಅಂಗಗಳು ಸ್ವಸ್ತವಾಗಿದ್ದರೂ, ಕೇವಲ ಒಂದು ಹಲ್ಲು ಅಥವಾ ಹೆಬ್ಬೆಟ್ಟಿನ ನೋವು ಒಬ್ಬ ಮನುಷ್ಯನನ್ನು ಕಷ್ಟಕ್ಕೊಳಪಡಿಸುತ್ತದೆ. ದೇಹ ವೆಲ್ಲ ವೇದನೆ ಪಡುತ್ತಿರುವಾಗ; ಕೇವಲ ಒಂದು ಹಲ್ಲು ಅಥವಾ ಹೆಬ್ಬೆಟ್ಟು ಸ್ವಲ್ಪವೂ ವೇದನೆಯನ್ನು ಕಡಿಮೆ ಮಾಡಲಾರದು.

ಕೆಟ್ಟತನದ ಸ್ವಲ್ಪ ಭಾಗವು ಸಮಾಧಾನವನ್ನು, ಸಾಂಗತ್ಯ ಮತ್ತು ಸಂತೋಷ ವನ್ನು ನಾಶಮಾಡಬಹುದು. 25:2-39ರಲ್ಲಿ, ಇದು ನಾಬಲನಿಂದ ವಿವರಿಸಲ್ಪಟ್ಟಿದೆ. ಅವನು ಸದಾಕಾಲಕ್ಕೂ "ಮೂರ್ಖ ಮನುಷ್ಯ"ನೆಂದು ನೆನಪಿಸಲ್ಪಡುತ್ತಾನೆ. ಈ ಬಿರುದು ಅವನು ಬಲೆಯಿಲ್ಲದವನು ಮತ್ತು ಸೈತಾನನಿಗೆ ಸಂಬಂಧಿಸಿದವನು ಎಂದು ಸೂಚಿಸುತ್ತದೆ.

ನಾಬಾಲನು ಬಹಳ ಶ್ರೀಮಂತನಾಗಿದ್ದನು. ಅವನಲ್ಲಿ ಕುರಿ ಮತ್ತು ಆಡುಗಳ ದೊಡ್ಡ ಹಿಂಡಿತ್ತು (25:2). ಜಗತ್ತು ಹೆಮ್ಮೆ ಪಡಬಹುದಾದ ರೀತಿಯಲ್ಲಿ ಅವನ "ದೊಡ್ಡತನವಿತ್ತು," ಅವನು ಕಾಲೇಬನ ಸಂತತಿಯವನು. ಇದನ್ನು "ನಾಯಿಯ ಸ್ವಭಾವ" ಎಂದು ಭಾಷಾಂತರಿಸಬಹುದು. ಇದು ಯೆಹೋಶುವನ ಕಾಲದ ದೈವಭಕ್ತ ಪ್ರಥಮಾನ್ವೇಷಕನಿಗೆ ಉಲ್ಲೇಖಿಸಿಲ್ಲ.

ಕುರಿಗಳ ಉಣ್ಣೆ ಕತ್ತರಿಸುವ ಕಾಲ ಬಂದಿತ್ತು. ಅದು ಉತ್ಸಾವದ, ಆನಂದದ ಮತ್ತು ಅದ್ದೂರಿಯ ಆದರಾತಿಥ್ಯದ ಸಮಯವಾಗಿತ್ತು (ಹೋಲಿಸು 2 ಸಮುವೇಲ 13:23, 24). "ಲಾಭ" ಎಣಿಸಲ್ಪಡುತ್ತಿತ್ತು ಮತ್ತು ಮಾಡಿದ ಸೇವೆಗೆ ತಕ್ಕ ಸಂಬಳ ಕೊಡಲಾಗುತ್ತಿತ್ತು. ಜಿಪುಣ ನಾಬಾಲನಲ್ಲಿ ಆನಂದವಾಗಲಿ ಅಥವಾ ಪದ್ಧತಿಗನು ಸಾರ ವಾದ ಅತಿಥಿಸತ್ಕಾರದ ಎಳೆಯಾಗಲಿ ಇರಲಿಲ್ಲ. ದಾವೀದನು ಮಾಡಿದ ಸೇವೆಗೆ ವೇತನ ಸಲ್ಲಿಸಿದ್ದಕ್ಕೆ ನಾಬಾಲನಿಗೆ ವ್ಯಂಗ್ಯನಗೆಯಾಗಿತು (25:14-16), ನಾಬಾಲನು ಹಾಸ್ಯ ಮಾಡಿದನು. ಈ ಕೀಳು ಮಾಡಿ ನೋಡುವ ಅವನ ಭಾವನೆಯಿಂದಾಗಿ ನಾಬಾಲನು ಬೇಗನೆ ಸತ್ತು ಹೋದನು.

ನಾಬಾಲನು ತನ್ನ ಸುತ್ತಲಿದ್ದವರ ಆನಂದವನ್ನು ಹಾಳು ಮಾಡುತ್ತಿದ್ದನು. ದೈವ ಭಕ್ತ ಅಬೀಗೈಲಳು ಅವನ ಒರಟು ಮತ್ತು ಕ್ರೂರ ಸ್ವಭಾವವನ್ನು ಬಹು ಕಾಲದವರೆಗೆ ಅನುಭವಿಸಿದ್ದರ ಪರಿಣಾಮವಾಗಿ ಅವಳಲ್ಲಿ ಪತ್ನಿಯು ಸಲ್ಲಿಸಬಹುದಾದ ಗೌರವ ಮತ್ತು ಪ್ರೀತಿ ಸತ್ತು ಹೋಗಿತ್ತು (25:25). ನಾಬಲನೊಬ್ಬ ಅನಾಗರಿಕ ಮತ್ತು ದೇವರ ವೈರಿಗೆ ಸಂಬಂಧಪಟ್ಟ ವ್ಯಕ್ತಿಯಾಗಿ ಸೇವಕರು ತಿಳುಕೊಂಡಿದ್ದರು.

## ನಾಬಾಲನ ಬಿತ್ತುವಿಕೆ

ನಾಬಾಲನು ಸ್ವಾವಲಂಬಿಯಾಗಿದ್ದನು (25:11). ತನಗೆ ಯಾರೂ ಬೇಡವೆಂದು ತಿಳಿದಿದ್ದನು. ತನಗೆ ಯಾರೊಂದಿಗೂ, ದೇವರೊಂದಿಗೂ ಸಮಧಾನ ಬೇಡವೆಂದು ನಂಬಿದ್ದನು (25:6, 10). ಈ ಭಾವನೆಯು ಅವನನ್ನು ಒರಟಾಗಿಯೂ ಮತ್ತು ಕ್ರೂರಿಯಾಗಿಯೂ ಮಾಡಿತ್ತು (25:3). ಈ ಲೋಕದಲ್ಲಿ ದೇವರಿಲ್ಲದೇ ವ್ಯಸನಕರವಾದ ಜೀವನ ಜೀವಿಸುವ ಎಲ್ಲರನ್ನು ಪ್ರತಿನಿಧಿಸುತ್ತಾನೆ. ಅವನ ಅಹಂಕಾರದಿಂದಾಗಿ ತನಗೆ ಸಹಾಯವಾಗುವ ಬೋಧನೆಯನ್ನು ಕೊಡುವ ಎಲ್ಲರ ವಿಷಯದಲ್ಲಿ ನಾಬಾಲನು ಕಠಿಣ ಮತ್ತು ಅಸಮಧಾನಗೊಳ್ಳುತ್ತಿದ್ದನು (25:17ಬಿ). ಅವನು ಅನ್ಯಾಯ ಮಾಡುವವನು ಮತ್ತು ಜಿಪುಣನು ಆಗಿದ್ದನು (25:21). ಅವನು ಇತರರನ್ನು ಹೀಯಾಳಿಸುತ್ತಿದ್ದನು (25:10-12). ಅವನು ಅಶ್ಲೀಲ ಮತ್ತು ಅಪಮಾನಗೊಳಿಸುವ ಭಾಷೆಯುಪಯೋಗಿಸುತ್ತಿದ್ದನು (25:14). ನಾಬಾಲನು ಕೆಟ್ಟದಾಗಿ ಮಾತಾಡುತ್ತಿದ್ದನು. ಅವನ ಮಾತುಗಳು ಒರಟಾಗಿಯೂ, ಕ್ರೂರವಾಗಿಯೂ ಮತ್ತು ಅವಮಾನಕರ ವಾಗಿಯೂ ಇದ್ದವು. 25:14ರಲ್ಲಿನ "ಬಿದ್ದು ಬೈದನು" ಎಂಬ ಪದವು ನಿಜವಾಗಿಯೂ ನಾಬಾಲನು, "ಒಂದು ಪಕ್ಷಿಯು ತನ್ನ ಬೇಟೆಯ ಮೇಲೆ ಎರಗುವಂತೆ" ಎಂದು ಸೂಚಿಸುತ್ತದೆ. ನಿಯಂತ್ರಣವಿಲ್ಲದ ನಾಲಿಗೆಯು ಒಬ್ಬ ಮೂರ್ಖನನ್ನು ಸೂಚಿಸುತ್ತದೆ (ಜ್ಞಾನೋಕ್ತಿ 10:14; 18:6, 7). ನಾಬಾಲನು ಮೂರ್ಖನ ಮಾತುಗಳನ್ನು ಉಪಯೋಗಿ ಸುತ್ತಾ, ದಾವೀದನೆಡೆಗೆ ಸಾಧ್ಯವಾದ ಅವಮಾನಕರವಾದ ಮಾತುಗಳನ್ನು ಎಸೆದನು. ಮತ್ತು ಹಾಗೆ ಮಾಡುವದರಲ್ಲಿ ಸಂತೋಷಪಟ್ಟನು (25:10, 11). ತನ್ನ ಮಾತುಗಳ ಪರಿಣಾಮವನ್ನು ತಿಳಿಯದೇ ನಾಬಾಲನು ಮಾತಾಡಿದನು.

ಇತರರೂ ಕೆಟ್ಟದ್ದನ್ನು ಮಾಡಲು ನಾಬಾಲನು ಪ್ರಭಾವ ಬೀರಿದನು, ಅವನ ಪ್ರಸನ್ನತೆ, ಮಾತುಗಳು ಮತ್ತು ನಡತೆ ದಾವೀದನನ್ನು ಅವನ ಸ್ವಭಾವಕ್ಕೆ ವಿರುದ್ಧವಾ ದದ್ದನ್ನು ಮಾಡುವಂತೆ ಕೆಣಕಿತು (25:13, 22). ದಾವೀದನು ಯಾವ ಹೆಜ್ಜೆಯನ್ನು ಇಡುವದಕ್ಕಿಂತ ಮುಂಚೆ ದೇವರ ಜೊತೆ ಸಮಾಲೋಚಿಸುತ್ತಿದ್ದನು. ಆದರೆ ಈ ಬಾರಿ ನಾಬಾಲನು ದಾವೀದನನ್ನು ಬಹಳವಾಗಿ ಕೆಣಕಿದ್ದರಿಂದ ಅವನು ನಿಯಂತ್ರಣ ಕಳಕೊಂಡನು. ಅದು ನ್ಯಾಯಯುತವಾಗಿರಲಿಲ್ಲ ಮತ್ತು ದಾವೀದನು ತನ್ನ ತಪ್ಪನ್ನು ಒಪ್ಪಿಕೊಂಡನು (25:32, 33).

ನಾಬಾಲನೂ ಕೃತಜ್ಞನಾಗಿದ್ದನು. ದಾವೀದನು ತನಗೇನು ಮಾಡಿದ್ದನೆಂದು ಒಪ್ಪಿಕೊಳ್ಳಲೂ ಇಲ್ಲ (25:16, 21). ಇಂಥ ಕೃತಜ್ಞತೆ ಇಲ್ಲದಿರುವದು ಸೈತಾನನ ಮಕ್ಕಳನ್ನು ಸೂಚಿಸುತ್ತದೆ!

ನಾಬಾಲನು ಒಬ್ಬ ಕುಡುಕನಾಗಿದ್ದನು. ಮದ್ಯಪಾನಕ್ಕೆ ತನ್ನನ್ನು ಸಂಪೂರ್ಣ ವಾಗಿ ಒಪ್ಪಿಸಿಬಿಟ್ಟಿದ್ದನು. ಸಂಭ್ರಮದ ವಾತಾವರಣವನ್ನು ಆನಂದಿಸುತ್ತಿದ್ದನು ಮತ್ತು ಆಶೆಗಳು ತನ್ನನ್ನು ನಿಯಂತ್ರಿಸಲು ಅವಕಾಶ ಮಾಡಿದನು. ಇಂಥ ಗುಣವು, ಸೈತಾನನನ್ನು ಹಿಂಬಾಲಿಸುವ ಪ್ರತಿಯೊಬ್ಬನಲ್ಲಿಯೂ ಇರುವದನ್ನು ಸತ್ಯವೇದದ ತುಂಬ ನೋಡು ತ್ತೇವೆ (ಜ್ಞಾನೋಕ್ತಿ 31:4-6; 20:1; ಇತ್ಯಾದಿ).

## ನಾಬಾಲನ ಕೊಯ್ಲು

ಸೈತಾನನ ಲಕ್ಷಣಗಳನ್ನು ಹೊಂದಿ ಅದರಂತೆ ಜೀವಿಸುವ ಪ್ರತಿಯೊಬ್ಬನೂ ತುಚ್ಛವಾದ ಪರಿಣಾಮವನ್ನು ಅನುಭವಿಸುವನು. ತನ್ನ ದುಷ್ಟತನದ ನೇರ ಪರಿಣಾಮ ವಾಗಿ ನಾಬಾಲನ ಜೀವನವು ಮೂರು ಭಯಪಡಿಸುವ ಪರಿಣಾಮಗಳನ್ನು ಕಂಡಿತು.

ನಾಬಾಲನು ಯಾರಿಂದಲೂ ಗೌರವಿಸಲ್ಪಡಲಿಲ್ಲ! ಅವನು ಐಶ್ವರ್ಯವನ್ನು ಅನುಭವಿಸಿದನು, ಮತ್ತು ಅಂಥ ಘನತೆ ಮತ್ತು ಅಧಿಕಾರ ಗೌರವ ಕೊಡಬೇಕಿತ್ತು, ಆದರೆ ಅದು ಕೊಡಲಿಲ್ಲ! ನಾಬಾಲನ ಕಾರ್ಯಗಳ ಕುರಿತು ಒಬ್ಬ ಯೌವನಸ್ಥನು ನಾಚಿಕೆ ಪಟ್ಟನು

(25:17). ಈ ಕೆಲಸದವನ ಕೊನೆಯ ಮಾತುಗಳು, ನಾಬಾಲನಿಗೆ ಆಳುಗಳಿಂದ ಯಾವ ಗೌರವವಿರಲಿಲ್ಲವೆಂದು ಸೂಚಿಸುತ್ತದೆ. ಅವರಿಗೆ ನಾಬಾಲನು "ಸೈತಾನನ ಮಗನು" (ಹೋಲಿಸು 2 ಕೊರಿಂಥ 6:15). ದೈವ ಭಕ್ತ ಅಬೀಗೈಲಳಿಗೆ ತನ್ನ ಗಂಡನ ವಿಷಯದಲ್ಲಿ ಯಾವ ಗೌರವವಿರಲಿಲ್ಲ (25:25). ಅವಳ ಅಭಿಪ್ರಾಯವು ಆಳುಗಳಿಗಿಂತ ಕಡಿಮೆಯಾಗಿತ್ತು. ದೇವರು ತನ್ನ ಹಿಂಬಾಲಕರಿಗೆ ಆಜ್ಞಾಪಿಸಿರುವದಕ್ಕೆ ವಿರುದ್ಧವಾದ ಪ್ರಭಾವವಾಗಿದೆ (ಮತ್ತಾಯ 5:16; 1 ಪೇತ್ರ 2:11, 12).

ನಾಬಾಲನು ಇತಿಹಾಸದ ಪುಟಗಳಲ್ಲಿ "ಮಹಾ ಮೂರ್ಖ"ನೆಂದು ನಮೂದಿಸಲ್ಪಟ್ಟಿದ್ದಾನೆ. ಅವನು ತನ್ನ ಹೆಸರಿಗೆ ತಕ್ಕಂತೆ ನಡೆದನು (25:25) ಯಾಕೆಂದರೆ ಮೂರ್ಖತನವು ಅವನ ಕ್ರಾರ್ಯಗಳನ್ನು ಹಿಂಬಾಲಿಸುತ್ತಿತ್ತು. ಅವನು ಮೂರ್ಖನೂ, ದುಷ್ಟನೂ ಮತ್ತು ದೇವರಿಲ್ಲದ ವ್ಯಕ್ತಿಯಾಗಿದ್ದನು. ವೆರ್ಡುವಿನ ಬಿಷಪ್ ಅವರಂತೆ ಅವನು ಮೂರ್ಖನಾಗಿದ್ದನು. ಅವರು, ಫ್ರಾನ್ಸ್ ದೇಶದ ರಾಜ ಲುಯಿಸ್ ಅವರಿಗೆ ಕೈದಿಗಳನ್ನು ಬಂಧನದಲ್ಲಿಡುವಂತೆ ಒಂದು ಕಬ್ಬಿಣದ ಪಂಜರವನ್ನು ಮಾಡುವಂತೆ ಉಪದೇಶಿಸಿದರು. ಅದು ಹೇಗೆ ನಿರ್ಮಿಸ ಬೇಕಿತ್ತೇಂದರೆ, ಅದರಲ್ಲಿ ಒಬ್ಬ ವ್ಯಕ್ತಿ ನೇರವಾಗಿ ಎದ್ದು ನಿಂತುಕೊಳ್ಳುವದಕ್ಕೂ ಆಗದೇ ಮಲಗುವದಕ್ಕೂ ಆಗದೇ, ಯಾವಾಗಲೂ ಬಾಗಿದ ಸ್ಥಾನದಲ್ಲಿರುವಂತೆ ನಿರ್ಮಿಸಬೇಕು. ಕೆಲ ಸಮಯದ ತರುವಾಯ ಅರಸನು ಈ ಬಿಷಪ್‌ರ ವಿಷಯದಲ್ಲಿ ಬೇಸರಗೊಂಡರು. ಆಗ ತಾವೇ ರಚಿಸಿದಂತ ಪಂಜರದಲ್ಲಿ ಬಿಷಪ್‌ರು ಬಂಧಿಸಲ್ಪಟ್ಟ ಮೊದಲ ವ್ಯಕ್ತಿಯಾದರು! ಅವರು ಅದರಲ್ಲಿ ಹದಿನಾಲ್ಕು ವರ್ಷ ಕಳೆದರು.

ನಾಬಾಲನ ಜೀವನವು ಬಹಳ ದುಃಖಕರವಾಗಿ ಅಂತ್ಯವಾಯಿತು (25:37-39). ನಾಬಾಲನು ಹೇಗೆ ತೀರಿಹೋದನೆಂದು ಎರಡು ಅಭಿಪ್ರಾಯಗಳಿವೆ. ಮುಂದೆ ಆಗಲಿದ್ದ ಸಂಗತಿಯನ್ನು ಕೇಳಿ ಭಯಪಟ್ಟು ಅವನು ಪಾರ್ಶ್ವ ವಾಯುವಿನ ಹೊಡೆತಕ್ಕೆ ಬಲಿಯಾಗಿ ಹತ್ತು ದಿನಗಳಲ್ಲಿ ಸತ್ತನು. ಇನ್ನೂ ಕೆಲವರು ಹೇಳುವಂತೆ ಅವನ ಸ್ವಭಾವದಂತೆ ದಾವೀದನ ವಿಷಯದಲ್ಲಿ ಬಲಿಯಾಗಿ ಹತ್ತು ದಿನಗಳಲ್ಲಿ ಸತ್ತನು. ಇನ್ನೂ ಕೆಲವರು ಹೇಳುವಂತೆ ಅವನ ಸ್ವಭಾವದಂತೆ ದಾವೀದನ ವಿಷಯದಲ್ಲಿ ಮತ್ತು ಅಬೀಗೈಲಳು ಮಾಡಿದ್ದರ ಕುರಿತು ಬಹು ಕೋಪಗೊಂಡಿದ್ದರಿಂದ ಆಘಾತವಾಗಿ ಹತ್ತು ದಿನಗಳಲ್ಲಿ ಸತ್ತನು.

ನಿರೀಕ್ಷೆಯಿಲ್ಲದ ಸಾವು ಯಾವಾಗಲೂ "ಸೈತಾನನ ಮಗನನ್ನು" ಕಾದಿರುಸುತ್ತದೆ. ಇದು ನಿಜವಾಗಿಯೂ ದೇವರನ್ನು ಹಿಂಬಾಲಿಸಲು ಮತ್ತು ಆತನ ಚಿತ್ತಕ್ಕೆ ವಿಧೇಯರಾಗಲು ಉತ್ತೇಜಿಸುತ್ತದೆ (ಜ್ಞಾನೋಕ್ತಿ 5:22; 11:7ಬಿ; 14:32; ಕೀರ್ತನೆ 116:15; ಪ್ರಸಂಗಿ 7:1). ಮರಣದ ಸಮಯದಲ್ಲಿ ಹೇಳುವ ಸಾಮಾನ್ಯವಾದ ವಾಕ್ಯವೇನೆಂದರೆ, "ಅವನು ಜೀವಿಸಿದಂತೆ ಸತ್ತನು" ನಾಬಾಲನ ಕುರಿತು ಇದು ಎಷ್ಟು ಸತ್ಯ! ಇಂದು ಅನೇಕ ಜನರ ವಿಷಯದಲ್ಲೂ ಸತ್ಯವಾಗಿದೆ. ನಮ್ಮ ಜೀವನವು ವ್ಯಸನಕರವಾಗಿ ಅಂತ್ಯವಾಗ ಬಾರದೆಂದಿದ್ದರೆ, ನಾವು ದೇವರ ಮಾರ್ಗದರ್ಶನದ ಪ್ರಕಾರ ನಡೆಯೋಣ.

## ಇಂದಿನ ದಿನಕ್ಕೆ ನಾಬಾಲನ ಪಾಠ

ನಾಬಾಲನಂತ ವ್ಯಕ್ತಿಯನ್ನು ಮದುವೆ ಮಾಡಿಕೊಂಡು, ದೇವರಿಗೆ ನಂಬಿಗಸ್ತ ರಾಗಿ ನಡೆಯಲು ಸಾಧ್ಯವಿದೆ. ನಾಬಾಲನ ಮನೆಯ ವಾತಾವರಣ ಆನಂದಕರವಾ ಗಿರಲಿಲ್ಲ. ಅಬೀಗೈಲಳ ದೈವಭಕ್ತಿಯ ಸ್ವಭಾವ ಮತ್ತು ನಾಬಾಲನ ಸೈತಾನನ ಗುಣ ಒಂದಕ್ಕೊಂದು ಘರ್ಷಿಸಿ ಮತ್ತು ಕಷ್ಟಕರವಾಗಿ ಮಾಡಿರಬಹುದು. ಅವನು ಕೆಳ ಮನಸ್ಸುಳ್ಳವನಾಗಿದ್ದನು, ಕೇವಲ ಪ್ರಾಪಂಚಿಕ ದ್ರವ್ಯಕ್ಕೆ ನಿಷ್ಠನಾಗಿದ್ದನು, ದೇವರ ಕಡೆಗೆ ಅಸಡ್ಡೆ ಮಾಡುವವನೂ ಮತ್ತು ಅಸಹ್ಯಕರವಾದ ಚಟಗಳುಳ್ಳವನಾಗಿದ್ದನು. ಅವನು ಕೆಟ್ಟ ನಾಲಿಗೆಯವನು ಮತ್ತು ಭಯಂಕರ ಪ್ರಭಾವವುಳ್ಳವನೂ ಆಗಿದ್ದನು. ಅಬೀಗೈಲಳು ಹೇಳಿಕೊಳ್ಳುವ ಎಲ್ಲಾ ಸಂಗತಿಗಳು

ಅವನಲ್ಲಿದ್ದವು! ಆದರೂ ಅವನೊಂದಿಗೆ ಜೀವಿಸಿದಳು. ಆಧುನಿಕ "ನಾಬಾಲನೊಂದಿಗೆ" ದಾಂಪತ್ಯ ಜೀವನವನ್ನು ಸಾಗಿಸುವ ಆಧುನಿಕ "ಅಬೀಗೈಲ"ರನ್ನು ಅಭಿನಂದಿಸಬೇಕು.

ಪ್ರತಿಕಾರವು ಎಂದಿಗೂ ಸರಿಯಲ್ಲ! ಒಬ್ಬರು ಸರಿಯಾಗಿ ಹೇಳಿದ್ದಾರೆ, "ಒಬ್ಬ ಪಾಪಿಯ ಬಾಯಿಗೆ ಸೈತಾನನು ಹಾಕುವಂತ ಅತಿ ಐಶ್ವರ್ಯವಂತ ತುತ್ತು ಪ್ರತಿಕಾರ ವಾಗಿದೆ." ನಮ್ಮ ವಿರುದ್ಧ ಮಾಡಿದ ಎಲ್ಲಾ ತಪ್ಪುಗಳಿಗೆ ಪ್ರತಿಕಾರ ತೆಗೆದುಕೊಳ್ಳುವ ಸ್ಥಾನದಲ್ಲಿ ನಾವು ಇಲ್ಲ (25:38, 39; ರೋಮಾಪುರ 12:19).

ನಾವು ಇಂದು ಜೀವಿಸುವ ರೀತಿಯು, ನಾಳೆ ಇತರರು ಓದುವಂತೆ ಶಾಶ್ವತವಾಗಿ ಇತಿಹಾಸದಲ್ಲಿ ದಾಖಲೆಯಾಗುತ್ತದೆ. ನಿಮ್ಮ ಇತಿಹಾಸವು ನಿಮ್ಮನ್ನು "ನಾಬಾಲನೆಂದು" ದಾಖಲಿಸದಂತೆ ಎಚ್ಚರವಹಿಸಿರಿ. ದುಃಖದಲ್ಲಿ ಅಂತ್ಯವಾಗಿರುವ ಸ್ವಾರ್ಥಮಯ ಜೀವನವನ್ನು ನೆನಪಿಸಿರಿ! ಕೇವಲ ನಷ್ಟವು ಅಲ್ಲಿರುವದು (ಲೂಕ 12:20, 21; ಯಾಕೋಬ 4:13-16).

## ಮುಕ್ತಾಯ

ಎಂಥ ಅಂಧಕಾರದ ಅಧ್ಯಯನ! ಒಬ್ಬ ದುಷ್ಟ ಮನುಷ್ಯನ ಪ್ರಭಾವವು ಸಂಪೂರ್ಣ ವಿವರಣೆಯ ಮೇಲೆ ಮೋಡ ಕವಿಸಿತು. "ದೇವರ ಹೃದಯಕ್ಕೆ ಒಪ್ಪುವ ಮನುಷ್ಯನನ್ನು" ದೇವರಿಗೆ ವಿರುದ್ಧವಾದ ಭಾವನೆ ಪ್ರತಿಕಾರ ತೆಗೆದುಕೊಳ್ಳುವದಕ್ಕೆ ನಡೆಸಿತು. ದುಷ್ಟತನದ ಒಂದು ಹನಿ ಬಹು ಒಳ್ಳೇದನ್ನು ಮಾಡುತ್ತದೆ!

"ಮೂರ್ಖರಾಗಿ" ನಡೆಯುವದು ವ್ಯಸನಕರವೆಂದು ಮನದಟ್ಟು ಮಾಡಿಕೊಂಡು, ನಾವು ಈ ಅಧ್ಯಾಯದಿಂದ ಹೊರಬರೋಣ. ನಾಬಾಲನನ್ನು ನೆನೆಪಿಸಿಕೊಳ್ಳಿರಿ, ಸೈತಾನನ ಮಗನು ಅವನು. ಅವನ ತಪ್ಪನ್ನು ನಕಲು ಮಾಡಬೇಡಿರಿ.